## ಶಿವಪ್ಪನಾಯಕನ ಶಿಸ್ತು

ಕೆಳದಿಯ ವೀರಭದ್ರ ದೇವಾಲಯದ ಗೋಡೆಯ ಮೇಲಿನ ಕೆತ್ತನೆಗಳು ಅಪೂರ್ವ ಎನಿಸುವಂತಹವು. ದೇವಾಲಯದ ಹಿಂಭಾಗದ ಗೋಡೆಯ ಮೇಲಿರುವ ಅಳತೆಯ ಪಟ್ಟಿಯ ಚಿತ್ರ ಇಲ್ಲಿದೆ. ಶಿವಪ್ಪನಾಯಕನನ್ನು ಅಳತೆ–ತೂಕದ ನ್ಯಾಯ ವಿತರಕ ಎಂದು ಗುರುತಿಸುತ್ತಾರೆ. ಆತ ಅನುಸರಿಸುತ್ತಿದ್ದ ಅಳತೆಗೆ ಬಳಸುತ್ತಿದ್ದ ಅಳತೆಪಟ್ಟಿಯ ಮಾದರಿ ಇದೆಂದು ಹೇಳಲಾಗಿದೆ. ಆರೋಗ್ಯ ಪುರುಷನ ಪಕ್ಕದಲ್ಲಿ ಈ ಅಳತೆ ಪಟ್ಟಿ ಇದೆ.

**-ಮಯೂರ್ ಎಸ್. ತಾಂಡೇಲ, ಕುಂದಾಪುರ**





## ಕರಿಬೇವಿನ ಬುಡದಲ್ಲಿ ನೂರಾರು ಮಕ್ಕಳು

ಇಷ್ಟೊಂದು ಸಂಖ್ಯೆಯ ಕರಿಬೇವಿನ ಗಿಡಗಳು ಒಟ್ಟಾಗಿ ಹುಟ್ಟಿರುವುದನ್ನು ನೀವು ಎಲ್ಲಿಯಾದರೂ ಕಂಡಿರುವಿರಾ? ನಮ್ಮ ತೋಟದಲ್ಲಿ ಪ್ರಧಾನ ಕರಿಬೇವಿನ ಮರದ ಬುಡದಲ್ಲಿ ಬಹುಸಂಖ್ಯೆಯಲ್ಲಿ ಹುಟ್ಟಿರುವ ಹುಲುಸಾದ ಈ ಪುಟ್ಟ ಕರಿಬೇವಿನ ಗಿಡಗಳನ್ನು ನೋಡಿದಾಗ 'ಗಾಂಧಾರಿ ಪೆತ್ತಳು ನೂರೊಂದು ಮಕ್ಕಳಾ' ಎಂಬ ಹಳೆ ಹಾಡು ನೆನಪಿಗೆ ಬರುವುದು.

**ಚಿತ್ರ-ಬರಹ: ಪಿ. ಪಾರ್ವತಿ ಐ. ಭಟ್, ಪುಂಡಿಕಾಯ್**

## ಆ ಪೆನ್ನು ಈ ಪೆನ್ನು!

ಚಿತ್ರದಲ್ಲಿರುವ ಈ ಎರಡು ಪೆನ್ನುಗಳನ್ನು ನೋಡಿದರೆ ಅವುಗಳ ಕುರಿತು ಹಲವಾರು ವಿಚಾರಗಳು ಮನದಲ್ಲಿ ಮೂಡುತ್ತವೆ. ಈ ಪೆನ್ನುಗಳ ನಡುವೆ ಎರಡು ತಲೆಮಾರುಗಳ ಅಂತರವೇ ಇದೆ. ಒಂದು ಸುಮಾರು ಐವತ್ತರ ದಶಕದ್ದಾದರೆ, ಇನ್ನೊಂದು ಈಚಿನದು. ಅಂದರೆ ಸುಮಾರು ಅರವತ್ತು ವರ್ಷಗಳ ಅಂತರ. ಅಜ್ಜ ಮೊಮ್ಮಗ ಎನ್ನಬಹುದು!

ಮೊದಲನೆಯ ಪೆನ್ನು ನನ್ನ ಮಿತ್ರ ರಾಮಗೋಪಾಲ ಅವರ ತಂದೆ ಉಪಯೋಗಿಸುತ್ತಿದ್ದುದು. ಅದರ ಗಾತ್ರ ನೋಡಿ, ಈಗಿನ ಮಕ್ಕಳು ಕೈಯಲ್ಲಿ ಹಿಡಿಯುವುದಕ್ಕೂ ಅನುಮಾನಿಸುತ್ತಾರೇನೋ...! ಷಾಯಿ ತುಂಬಿ ಬರೆಯುವ ನಿಬ್ಬಿನ ಪೆನ್ನದು. ಕಿರುಗಾತ್ರದ ರೀಫಿಲ್ ಕಡ್ಡಿಯ ಪೆನ್ನನ್ನು ಹೋಲಿಕೆಗೋಸ್ಕರ ಜತೆಯಲ್ಲಿ ಇಟ್ಟು ಫೋಟೊ ತೆಗೆದಿದ್ದೇನಷ್ಟೆ.

**-ಕೆ.ಪಿ. ಸತ್ಯನಾರಾಯಣ, ಹಾಸನ**

